# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

# ಉತ್ತರ ಕನ್ನಡ : ಕಾರವಾರ

## ಎಸ್ಸಿ ನಂ. 36/2014

**ದೋ.ಸಾ. : 17 ಫ್ರಾ.ಸಾ. : 4**

| | | |
|---|---|---|
| ಸಾಕ್ಷಿಯ ಹೆಸರು | : | ವಿಜಯಕುಮಾರ ಈಶ್ವರ |
| ತಂದೆಯ ಹೆಸರು | : | ಈಶ್ವರ |
| ವಯಸ್ಸು | : | 39 ವರ್ಷ |
| ಕೆಲಸ | : | ಚಾಲಕ. |
| ವಾಸ | : | ರಾಜೀವನಗರ, ಕಧ್ರಾ, ಕಾರವಾರ. |

**ದಿನಾಂಕಃ 22-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿನಾಂಕ 15.02.2014 ರಂದು ಪೋಲಿಸರು ನನ್ನನ್ನು ಪಂಚನಾಮೆಗಾಗಿ ಕಧ್ರಾದ ಸಿ.ಪಿ.ಐ ಕಚೇರಿಗೆ ಬರುವಂತೆ ಮೌಖಿಕವಾಗಿ ತಿಳಿಸಿದ್ದರು. ಅದರಂತೆ ನಾನು ಆ ದಿನ ರಾತ್ರಿ 9.00 ಗಂಟೆಗೆ ನಾನು ಕಧ್ರಾದ ಸಿ.ಪಿ.ಐ ಕಚೇರಿಗೆ ಹೋಗಿದ್ದು, ಅಲ್ಲಿ ಚಾಸಾ-16 ರವರು ಸಹ ಹಾಜರಿದ್ದರು. ಆಗ ಪೋಲಿಸರು ಮೃತ ವೇಲುವಿನ ಕಂದು ಮತ್ತು ಬಿಳಿ ಬಣ್ಣದ ಒಂದು ಶರ್ಟ್, ಹಳದಿ ಅಂಚುವುಳ್ಳ ಬಿಳಿ ಬಣ್ಣದ ಒಂದು ಪಂಚೆ, ಹಸಿರು ಬಣ್ಣದ ಒಂದು ಅಂಡರ್ ವೇರ್ ಗಳನ್ನು ತಂದು ಹಾಜರುಪಡಿಸಿದ್ದು, ಸದರಿ ಬಟ್ಟೆಗಳನ್ನು ತನಿಖಾಧಿಕಾರಿ ಚಾಸಾ-57 ರವರು ನಮ್ಮ ಸಮಕ್ಷಮ ಜಪ್ತು ಪಂಚನಾಮೆ ಮಾಡಿ, ಜಪ್ತುಪಡಿಸಿಕೊಂಡರು ಹಾಗೂ ಅವುಗಳನ್ನು ಪ್ರತ್ಯೇಕವಾಗಿ ಕವರ್ ಗಳಲ್ಲಿ ಹಾಕಿ ಸೀಲು ಮಾಡಿ, ಅವುಗಳ ಮೇಲೆ ಚೀಟಿ ಅಂಟಿಸಿ, ಸದರಿ ಚೀಟಿಯ ಮೇಲೆ ನಮ್ಮ ರುಜುಗಳನ್ನು ಪಡೆದುಕೊಂಡರು. ಸದರಿ ಜಪ್ತು ಪಂಚನಾಮೆಗೆ ನನ್ನ ಹಾಗೂ ಚಾಸಾ-16 ರವರ ರುಜುವನ್ನು ಪಡೆದುಕೊಂಡರು. ಜಪ್ತು ಪಂಚನಾಮೆಯ ಕಾಲಕ್ಕೆ ನಾವು ಬಟ್ಟೆಗಳನ್ನು ನೋಡಿದಾಗ ಸದರಿ ಬಟ್ಟೆಗಳಿಗೆ ರಕ್ತ ತಾಗಿತ್ತು. ಜಪ್ತು ಪಂಚನಾಮೆಯನ್ನು ರಾತ್ರಿ 9.00 ಗಂಟೆಯಿಂದ 9.30 ಗಂಟೆಯವರೆಗೆ ಮಾಡಿರುತ್ತಾರೆ. ಸಾಕ್ಷಿಯು ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-22 ಎಂದು, ಸಾಕ್ಷಿಯ ರುಜುವನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.

ಜಪ್ತುಪಡಿಸಿಕೊಂಡ ಬಟ್ಟೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಕ್ರಮವಾಗಿ ಮು.ಮಾ 19, 20 ಮತ್ತು 21 ಎಂದು ಗುರುತಿಸಲಾಗಿದ್ದು, ಅವುಗಳ ಮೇಲೆ ಇರುವ ಸಾಕ್ಷಿಯ ರುಜುಗಳನ್ನು ನಿಪಿ-19(ಎ), 20(ಎ) ಮತ್ತು 21(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ನ್ಯಾಯವಾದಿ ಶ್ರೀ ಎ.ಎ.ಎ ವಕೀಲರಿಂದ**

2. ಪೋಲಿಸರು ನನ್ನ ಮನೆಗೆ ಬಂದು ಪಂಚನಾಮೆಗೆ ಬರುವಂತೆ ಕರೆದಿದ್ದರು. ಪೋಲಿಸರು ನನ್ನನ್ನು ಪಂಚನಾಮೆಗೆ ಕರೆಸಿದ ದಿನ ಯಾವ ವಾರ ಎಂದು ನನಗೆ ನೆನಪಿಲ್ಲ. ನಾನು ಪಂಚನಾವೆಗಾಗಿ ಸಿ.ಪಿ.ಐ ಕಚೇರಿಗೆ ಹೋದಾಗ ಎಷ್ಟು ಸಹಿಗಳನ್ನು ಮಾಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ನಾನು ಸಿ.ಪಿ.ಐ ಕಚೇರಿಗೆ ಹೋದ ಕೂಡಲೇ ನನ್ನ ರುಜುವನ್ನು ಪಡೆದುಕೊಂಡರು ಎಂದರೆ ಸಾಕ್ಷಿಯು ಪಂಚನಾಮೆಯ ನಂತರ ನನ್ನ ರುಜುವನ್ನು ಪಡೆದುಕೊಂಡರು ಎಂದು ನುಡಿಯುತ್ತಾರೆ. ಚಾಸಾ-16 ರವರು ಸಹ ನನ್ನೊಂದಿಗೆ ರುಜುವನ್ನು ಮಾಡಿರುತ್ತಾರೆ. ಪಂಚನಾಮೆಯನ್ನು ಬರೆದ ಪೋಲಿಸರ ಹೆಸರು ನನಗೆ ಗೊತ್ತಿಲ್ಲ. ಮು.ಮಾ 19 ರಿಂದ 21 ಗಳ ಮೇಲೆ ಹಾಕಿದ ಸೀಲಿನಲ್ಲಿ ಯಾವ ಚಿಹ್ನೆ ಇದೆ ಎಂದು ನನಗೆ ಗೊತ್ತಿಲ್ಲ. ಸದರಿ ಮು.ಮಾ ಗಳ ಮೇಲೆ ಯಾರು ಸೀಲು ಹಾಕಿದ್ದರು ಎಂದರೆ ಪೋಲಿಸರು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಮು.ಮಾಗಳ ಮೇಲೆ ಹಾಕಿದ ಸೀಲ್ ನ ಚಿಹ್ನೆ ಬಗ್ಗೆ ಜಪ್ತು ಪಂಚನಾಮೆಯಲ್ಲಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ-22 ಜಪ್ತುಪಂಚನಾಮೆಯ ಯಾವ ಪುಟದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ನೆನಪಿಲ್ಲ. ಅದೇ ರೀತಿ ಅದರಲ್ಲಿ ಯಾರು ಯಾರು ರುಜು ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನ್ಯಾಯಲಾಯದ ಮುಂದೆ ಇರುವ ಕವರ್ ಗಳಲ್ಲಿ ಏನೇನು ಇದೆ ಎಂದು ಹೇಳಲು ಬರುವುದೇ ಎಂದರೆ ಸಾಕ್ಷಿಯು ಮು.ಮಾಗಳನ್ನು ತೋರಿಸಿ ಅವುಗಳನ್ನು ಗುರುತಿಸುತ್ತಾರೆ. ಮು.ಮಾ 19 ರಿಂದ 21 ಬಟ್ಟೆಗಳು ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲಿ ಸಿಗುತ್ತದೆ ಎಂದರೆ ಸರಿ. ಮು.ಮಾಗಳನ್ನು ಇದೇ ಮೊದಲು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಹಾಗೂ ಪಂಚನಾಮೆಯನ್ನು ಮಾಡಿಲ್ಲ ಹಾಗೂ ಅವುಗಳನ್ನು ಪೋಲಿಸರು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ. ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ